ರೂಪಾಯಿಗಳ ಅಂದಾಜು ಪಟ್ಟಿಯ ಯೋಜನಾ ನಕ್ಷೆ ತಯಾರಿಸಲಾಗಿದೆ? ಇದಕ್ಕಾಗಿ 1996-97 ರ ಆಯವ್ಯಯದಲ್ಲಿ ಎಷ್ಟು ಹಣ ಇಡಲಾಗಿದೆ. ಈ ವ್ಯವಸ್ಥೆ ಸರಿಯಿರುವುದಿಲ್ಲ, ಕಾರಣ ಯಾವುದೇ ಒಂದು ಕಾಮಗಾರಿ ತೆಗೆದುಕೊಂಡರೆ ಕನಿಷ್ಟಪಕ್ಷ ಆ ಕಾಮಗಾರಿಯ ಮೂರನೇ ಒಂದು ಭಾಗದಷ್ಟು ಹಣ ಇಡಬೇಕಾಗಿದ್ದು, ಮಾನ್ಯ ಸಣ್ಣ ನೀರಾವರಿ ಸಚಿವರನ್ನು ಈ ಬಗ್ಗೆ ಒತ್ತಾಯಿಸುತ್ತೇನೆ. ಸವಣೂರು ಕೆರೆಯ ಮೋತಿ ತಲಬ ಕ್ಷೇತ್ರ ಸುಮಾರು 300 ಎಕರೆ ಇದ್ದು ಈ ಬಾಬ್ತಿಗೆ ಇನ್ನೂ ಹೆಚ್ಚಿನ ಹಣವನ್ನು ಈ ಕೂಡಲೇ ಒದಗಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನವನ್ನು ಮತ್ತೊಮ್ಮೆ ಈ ವಿಚಾರಕ್ಕೆ ವಿನಂತಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಧಾರವಾಡ ಜಿಲ್ಲೆ, ಸವಣೂರು ತಾಲ್ಲೂಕಿನ ಮೋತಿ ತಲಾಬ ಕೆರೆಯ ಹೂಳೆತ್ತುವ ಕಾಮಗಾರಿಯು 1996-97 ನೇ ಸಾಲಿನ ಆಯವ್ಯಯದ ಅಪೆಂಡಿಕ್ಸ್-ಇ ಭಾಗ 2 ರ ಹೊಸ ಕಾಮಗಾರಿಗಳ ಪಟ್ಟಿಯಲ್ಲಿ 30 ಲಕ್ಷ ರೂಪಾಯಿಗಳ ಅಂದಾಜು ಮೊತ್ತ ಹಾಗೂ 1000 ರೂ ಸಾಂಕೇತಿಕ ಅನುದಾನದೊಂದಿಗೆ ಸೇರಿರುತ್ತದೆ. ಪ್ರಸ್ತುತ ಸಾಲಿನಲ್ಲಿ ಈ ಕಾಮಗಾರಿಯ ಬಗ್ಗೆ ಸರ್ವೆ ಕಾರ್ಯ ಮಾಡಲು ಹಾಗೂ ಆರ್ಥಿಕ ಶಕ್ಯತೆಯನ್ನು ಪರಿಶೀಲಿಸಿ ವಿನ್ಯಾಸ ಮತ್ತು ವಿವರವಾದ ಅಂದಾಜನ್ನು ತಯಾರಿಸಲು ಸಾಂಕೇತಿಕ ಅನುದಾನವನ್ನು ಒದಗಿಸಲಾಗಿದೆ.

ಈ ಕೆರೆಯಲ್ಲಿ ತುಂಬಿರುವ ಹೂಳಿನ ಪ್ರಮಾಣದ ಬಗ್ಗೆ ಸಮೀಕ್ಷೆ ಮಾಡಿ, ಕಾಮಗಾರಿಯ ಶಕ್ಯತೆಯನ್ನು ಪರಿಶೀಲಿಸಿ, ವಿವರವಾದ ಅಂದಾಜನ್ನು ತಯಾರಿಸಲು ಬಿಜಾಪುರದ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಈ ಕಾಮಗಾರಿಯು ಆರ್ಥಿಕವಾಗಿ ಶಕ್ಯವಾದಲ್ಲಿ, ವಿವರವಾದ ಅಂದಾಜನ್ನು ತಯಾರಿಸಿ, ಮುಂದಿನ ಸಾಲಿನಲ್ಲಿ ಸಾಕಷ್ಟು ಅನುದಾನವನ್ನು ಒದಗಿಸಿ ಕಾಮಗಾರಿಯನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

(2) **ಮಂಗಳೂರಿನ ನೆಹರೂ ಮೈದಾನ ಪಕ್ಕದಲ್ಲಿ ಹಾಗೂ ಇತರೆ ಪ್ರಮುಖ ಪ್ರದೇಶಗಳಲ್ಲಿ ಸುಲಭ ಶೌಚಾಲಯಗಳನ್ನು ಕಟ್ಟುವ ಬಗ್ಗೆ.**

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :- ಮಾನ್ಯ ಉಪಾಧ್ಯಕ್ಷರೇ, ಮಂಗಳೂರಿನ ನೆಹರೂ ಮೈದಾನ ಪಕ್ಕದಲ್ಲಿ ಈಗಿರುವ ಸರ್ವೀಸ್ ಬಸ್ ನಿಲ್ದಾಣದಲ್ಲಿ ಶೌಚಾಲಯಗಳು ಇಲ್ಲದೇ ಇರುವುದರಿಂದ, ಜನರಿಗೆ ಅದರಲ್ಲೂ ಮಹಿಳೆಯರಿಗೆ ತುಂಬಾ ತೊಂದರೆಯುಂಟಾಗಿದೆ. ಅದೇ ರೀತಿ ಜನನಿಬಿಡ ಪ್ರದೇಶಗಳಾದ ಮಾರ್ಕೆಟ್ ಪ್ರದೇಶಗಳಲ್ಲಿ (ಉದಾ : ಉರ್ವಾ ಸ್ಟೋರ್) ಹಾಗೂ ಇತರ ಪ್ರಮುಖ ಪ್ರದೇಶಗಳಲ್ಲಿ ತಕ್ಷಣ ಸುಲಭ ಶೌಚಾಲಯಗಳನ್ನು ಕಟ್ಟುವಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :- ಮಾನ್ಯ ಉಪಾಧ್ಯಕ್ಷರೇ, ಮಂಗಳೂರು ಮಹಾನಗರ ಪಾಲಿಕೆಯ ನೆಹರೂ ಮೈದಾನದ ಬಳಿ ಇರುವ ತಾತ್ಕಾಲಿಕ ಬಸ್ ನಿಲ್ದಾಣದ ಬಳಿಯಲ್ಲಿರುವ ಸುಲಭ್ ಶೌಚಾಲಯವನ್ನು ಬಸ್ ನಿಲ್ದಾಣಕ್ಕೆ ಬರುವ ಸಾರ್ವಜನಿಕರಿಗೆ ಉಪಯೋಗಿಸುವ ವ್ಯವಸ್ಥೆ ಇದೆ. ಇಲ್ಲಿ ಸುಲಭ್ ಶೌಚಾಲಯ ಇರುವುದರಿಂದ ಬಸ್ ನಿಲ್ದಾಣವಾಗಿದೆ. ಖಾಯಂ ಬಸ್ ನಿಲ್ದಾಣವನ್ನು ನಿರ್ಮಿಸುವ ಬಗ್ಗೆ ದಿನಾಂಕ 29-7-96 ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಜನ ಪ್ರತಿನಿಧಿಗಳ ಸಭೆ ಕರೆಯಲಾಗಿದೆ. ಊರ್ವ ಮಾರ್ಕೆಟ್ ಮತ್ತಿತರ ಮಾರ್ಕೆಟ್‌ಗಳಲ್ಲಿ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯಗಳು ಇವೆ. ಮಂಗಳೂರು ಮಾರ್ಕೆಟ್ ಪ್ರದೇಶಗಳಲ್ಲಿ ಮತ್ತು ಇತರ ಜನನಿಬಿಡ ಪ್ರದೇಶ ಗಳಲ್ಲಿ ಇರುವ ಕಕ್ಕಸುಗಳನ್ನು ಸುಲಭ್ ಶೌಚಾಲಯ ಇವರಿಗೆ ವಹಿಸಿಕೊಡುವ ಬಗ್ಗೆ ಚರ್ಚಿಸಲು ದಿನಾಂಕ 29-7-96 ರ ಸಭೆಗೆ ಮಾನ್ಯ ಶಾಸಕರನ್ನೂ ಸಹ ಕರೆಯಲಾಗಿದೆ.

(3) **ಅರಣ್ಯ ಇಲಾಖೆಯ ಮುಖ್ಯ ಕಛೇರಿಯನ್ನು ಮುನಿರಾಬಾದ್‌ನಿಂದ ಕೊಪ್ಪಳಕ್ಕೆ ವರ್ಗಾ.**

ಶ್ರೀ ಕರಡಿ ಸಂಗಣ್ಣ (ಕೊಪ್ಪಳ) :- ಮಾನ್ಯ ಉಪಾಧ್ಯಕ್ಷರೇ, ಕೊಪ್ಪಳ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಮುಖ್ಯ ಕಛೇರಿ ಮುನಿರಾಬಾದ್‌ನಲ್ಲಿ ಇರುವುದು ಸರ್ಕಾರಕ್ಕೆ ಗೊತ್ತಿರುವಂಥ ವಿಚಾರ. ಆದರೆ, ಅರಣ್ಯ ವಲಯ ಕಛೇರಿ ತಾಲ್ಲೂಕಿನ (ಕೊನೆ) ಮೂಲೆಯಲ್ಲಿ ಇರುವುದರಿಂದ ತಾಲ್ಲೂಕಿನ ನಾಗರೀಕರಿಗೆ ಹಾಗೂ ರೈತಾಪಿ ಜನಾಂಗಕ್ಕೆ ದೈನಂದಿನ ಕೆಲಸಕಾರ್ಯಗಳಿಗೆ ಬಹಳ ತೊಂದರೆಯಾಗಿದೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಬೇಕಾದರೆ, ಖಿದ್ದಾಗಿ ಮುನಿರಾಬಾದಿಗೆ ಹೋಗಿ ಬರಬೇಕೆಂದರೆ, ರೈತರಿಗೆ ಆರ್ಥಿಕ ಮತ್ತು ಸಮಯದ ಹೊರೆ ಹೊರಬೇಕಾಗುತ್ತದೆ ಕಾರಣ, ಸರ್ಕಾರ ಸದರಿ ಕಛೇರಿಯನ್ನು ಕೊಪ್ಪಳ ನಗರಕ್ಕೆ ಸ್ಥಳಾಂತರಿಸ ಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):- ಮಾನ್ಯ ಉಪಾಧ್ಯಕ್ಷರೇ,

ಕೊಪ್ಪಳ ವಲಯದ ವಲಯ ಅರಣ್ಯಾಧಿಕಾರಿ ಕಛೇರಿಯ ಕೇಂದ್ರ ಸ್ಥಾನವು ಮುನಿರಾಬಾದ್‌ನಲ್ಲಿದ್ದು, ಅಲ್ಲಿ ಸದರಿ ಕಛೇರಿಯು ಸುಮಾರು 30 ವರ್ಷಗಳ ಹಿಂದೆಯೇ ಸ್ಥಾಪಿತಗೊಂಡು ಸಾರ್ವಜನಿಕರಿಗೆ ತೊಂದರೆಯಿಲ್ಲದೆ ಮತ್ತು ಅರಣ್ಯೀಕರಣ ಕೆಲಸಗಳನ್ನು ಸುಗಮವಾಗಿ ಹಾಗೂ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗಿದೆ. ಕೊಪ್ಪಳ ನಗರದ ಸುತ್ತಮುತ್ತಲೂ ಹೆಚ್ಚಿನ ಅರಣ್ಯ ಪ್ರದೇಶ ಇಲ್ಲದ ಪ್ರಯುಕ್ತ, ಮುನಿರಾಬಾದ್‌ನಲ್ಲಿ ಸಸ್ಯ ಕ್ಷೇತ್ರದಲ್ಲಿ ಉತ್ತಮ ಸಸಿಗಳನ್ನು ಬೆಳೆಸಲು ತುಂಗಭದ್ರಾ ಆಣೆಕಟ್ಟು ಸಮೀಪದಲ್ಲಿರು ವುದರಿಂದ ನೀರಿನ ಸೌಲಭ್ಯ ಚೆನ್ನಾಗಿದೆ. ಆದರೆ ಈ ಸೌಲಭ್ಯ ಕೊಪ್ಪಳದಲ್ಲಿ ಇರುವುದಿಲ್ಲ. ಆದೂ ಅಲ್ಲದೆ ಮುನಿರಾಬಾದ್‌ನಲ್ಲಿ ಅರಣ್ಯ ಅಭಿವೃದ್ಧಿ ಕಾರ್ಯಕ್ರಮ ಗಳಿಗೆ ಹೆಚ್ಚಿನ ಅರಣ್ಯ ಪ್ರದೇಶ ಮತ್ತು ಸರ್ಕಾರಿ ಭೂಮಿ ಇದ್ದು ಅಲ್ಲಿ ಕಾತರಕಿ,